# ಸರ್ವ ಶಿಕ್ಷಣ ಅಭಿಯಾನ ಸಮಿತಿ – ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 560 001

ಸಂಖ್ಯೆ: ಸಶಿಅ/ಮುಲೆಅ/ಲೆ.ಸ/2009-10

ದಿನಾಂಕ: 2.3.2010

## ಅಧಿಕೃತ ಜ್ಞಾಪನಾ

ವಿಷಯ: ಬ್ಲಾಕ್ ಹಂತದಲ್ಲಿ ಮತ್ತು ಇತರೆ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ ಅನುಷ್ಠಾನ ಘಟಕಗಳಿಗೆ ಲೆಕ್ಕ ನಿರ್ವಹಣೆ ಬಗ್ಗೆ ಮಾರ್ಗದರ್ಶನ ನೀಡಲು ಲೆಕ್ಕ ಅಧೀಕ್ಷಕರನ್ನು ನಿಯೋಜಿಸುವ ಬಗ್ಗೆ

ಉಲ್ಲೇಖ: 1) ದಿನಾಂಕ: 22.2.2010 ರಿಂದ 25.2.2010ರವರೆಗೆ ರಾಜ್ಯ ಮಟ್ಟದಲ್ಲಿ ಸರ್ವ ಶಿಕ್ಷಣ ಅಭಿಯಾನದ ಲೆಕ್ಕಪತ್ರ ನಿರ್ವಹಣೆ ಪುನಶ್ಚೇತನ ಕಾರ್ಯಾಗಾರ 2009-10

2) ಸಿ.ಎ.ರವರ ಲೆಕ್ಕ ತಪಾಸಣಾ ವರದಿ 2008-09

3) ಆಂತರಿಕ ಲೆಕ್ಕಪರಿಶೋಧನಾ ವರದಿಗಳು

4) 2ನೇ ಹಂತದ ಐ.ಪಿ.ಎ.ಐ (Institute of Public Auditors of India) ಇವರ ಪ್ರಗತಿ ಪರಿಶೀಲನಾ ವರದಿ

5) 9ನೇ ಜೆ.ಆರ್.ಎಂ ಪರಿಶೀಲನಾ ವರದಿ

= = =

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಕಾರ್ಯಾಗಾರ ಮತ್ತು ಲೆಕ್ಕ ತಪಾಸಣಾ ವರದಿಗಳಲ್ಲಿ ಪೂರಕ ಲೆಕ್ಕ ನಿರ್ವಹಣೆ ಮಾಡದಿರುವುದು ಕಂಡು ಬಂದಿದೆ.

ಇದಲ್ಲದೆ ಐ.ಪಿ.ಎ.ಐ ಮತ್ತು ಜೆ.ಆರ್.ಎಂ. ತಂಡಗಳು, ಕೆಲವು ಜಿಲ್ಲೆಗಳಲ್ಲಿ ಪ್ರಗತಿ ಪರಿಶೀಲನೆ ಕೈಗೊಂಡಿದ್ದ ಸಮಯದಲ್ಲಿ ಪ್ರಕಟಣಾ ಫಲಕಗಳನ್ನು ಶಾಲೆಗಳಲ್ಲಿ ನಿರ್ವಹಿಸದಿರುವುದು ಕಂಡು ಬಂದಿದ್ದು, ಕೂಡಲೆ ಕ್ರಮ ತೆಗೆದುಕೊಂಡು ಸಾಮಾಜಿಕ ತಪಾಸಣೆ / ಅರಿವು ಮೂಡಿಸಲು ಕ್ರಮವಹಿಸಲು ಸೂಚಿಸಿದೆ ಹಾಗೂ ಕಾರ್ಯಕ್ರಮ ಅನುಷ್ಠಾನ ಸಂದರ್ಭದಲ್ಲಿ ಹಲವಾರು ನ್ಯೂನತೆಗಳನ್ನು ವರದಿ ಮಾಡಿದ್ದು, ಇದರ ಪ್ರತಿಯನ್ನು ಈಗಾಗಲೇ ತಮಗೆ ಕಳುಹಿಸಿ ಅನುಪಾಲನೆ ಮಾಡಲು ತಿಳಿಸಿದೆ. ಆದಾಗ್ಯೂ ಕ್ರಮವಹಿಸದಿರುವುದು ವ್ಯಕ್ತವಾಗಿದೆ.

ಮೇಲಿನ ಎಲ್ಲಾ ವರದಿಗಳಲ್ಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರತಿ ತಿಂಗಳು ಕನಿಷ್ಠ ಒಂದು ದಿನ ಜಿಲ್ಲಾ ಲೆಕ್ಕ ಅಧೀಕ್ಷಕರು ಪ್ರತಿ ಬ್ಲಾಕ್‌ನಲ್ಲಿ ಲೆಕ್ಕ ಸಹಾಯಕರು, ಬ್ಲಾಕ್ ಸಂಪನ್ಮೂಲ ಸಮನ್ವಯಾಧಿಕಾರಿಗಳ ಸಭೆಯನ್ನು ಆಯೋಜಿಸಿ ಲೆಕ್ಕಪತ್ರ ನಿರ್ವಹಣೆ, ಖರೀದಿ ನಿಯಮ, ಮುಂಗಡ ಇತ್ಯರ್ಥಗಳು ಹಾಗೂ ಲೆಕ್ಕ ಸಮನ್ವಯದ ಬಗ್ಗೆ ಮಾರ್ಗದರ್ಶನ ನೀಡಲು ಅನುವಾಗುವಂತೆ ಲೆಕ್ಕ ಅಧೀಕ್ಷಕರನ್ನು ನಿಯೋಜಿಸಲು ಈ ಮೂಲಕ ನಿರ್ದೇಶಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು.

ಗೆ,

1. ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ – ಇವರ ಸೂಕ್ತ ಕ್ರಮಕ್ಕಾಗಿ
2. ಎಲ್ಲಾ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ – ಸೂಕ್ತ ಮೇಲುಸ್ತುವಾರಿಗಾಗಿ
3. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾಶಿಇ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು, ಸಶಿಅ – ಸೂಕ್ತ ಮೇಲುಸ್ತುವಾರಿಗಾಗಿ
4. ಎಲ್ಲಾ ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ಕೇಂದ್ರ, ಸರ್ವ ಶಿಕ್ಷಣ ಅಭಿಯಾನ – ಇವರ ಸೂಕ್ತ ಕ್ರಮಕ್ಕಾಗಿ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಬೆಂಗಳೂರು-1

ಸಿ4(7)ಸ.ಶಿ.ಅ. ಬಿ.ಆರ್.ಸಿ.ಸಿ.ಆರ್.ಪಿ.ನೇ.28/2008-09 ದಿನಾಂಕ:-23-12-2008.

## ಸುತ್ತೋಲೆ.

ವಿಷಯ:-ಸಿ.ಆರ್.ಪಿ.ಬಿ.ಆರ್.ಪಿ.ಹುದ್ದೆಗಳಿಗೆ ಅರ್ಹ ವ್ಯಕ್ತಿಗಳ ಆಯ್ಕೆ ಬಗ್ಗೆ.

ಉಲ್ಲೇಖ:(1)ಸರ್ಕಾರದ ಪತ್ರದ ಸಂಖ್ಯೆ:ಇಡಿ173 ಇ.ಟಿ.ಆರ್. 2007(ಪಿ) 01-10-2008.

(2)ಈ ಕಛೇರಿ ಪತ್ರದ ಸಂಖ್ಯೆ:ಸಿ3(5)ಪ್ರೌ.ಶಿ.ಸ್ಥಾ.ಮು.41/2005-06 ದಿ:16-10-2006.

(3)ದಿನಾಂಕ:17-12-2008ರ ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರ ಸಭಾ ನಡಾವಳಿ.

&&&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಖಾಲಿ ಇರುವ ಸಿ.ಆರ್.ಪಿ. ಮತ್ತು ಬಿ.ಆರ್.ಪಿ. ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡಲು ದಿನಾಂಕ:06-11-2008ರಲ್ಲಿ ಅನುಮತಿ ನೀಡಿರುವುದು ಸರಿಯಷ್ಟೇ.

ಈ ಸಂಬಂಧ ದಿನಾಂಕ:17-12-2008ರಂದು ರಾಜ್ಯ ಯೋಜನಾ ನಿರ್ದೇಶಕರು (ಎಸ್.ಎಸ್.ಎ.)ರವರ ಅಧ್ಯಕ್ಷತೆಯಲ್ಲಿ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ, ನಿರ್ದೇಶಕರು(ಪ್ರೌಢಶಿಕ್ಷಣ) ಸಹ ನಿರ್ದೇಶಕರು (ಆಡಳಿತ) ರವರ ಸಭೆಯಲ್ಲಿ ಚರ್ಚಿಸಿ, ಬಿ.ಆರ್.ಪಿ ಮತ್ತು ಸಿ.ಆರ್.ಪಿ.ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಇಲಾಖೆಯಿಂದ ಹೊರಡಿಸಲಾಗಿರುವ ಹಿಂದಿನ ಎಲ್ಲಾ ಆದೇಶಗಳನ್ನು ರದ್ದುಪಡಿಸಲು ಸರ್ವಾನುಮತದಿಂದ ನಿರ್ಣಯಿಸಿ, ಎಲ್ಲಾ ಆದೇಶಗಳನ್ನು ರದ್ದು ಪಡಿಸಲಾಗಿದೆ. ಈ ಕೆಳಗೆ ನೀಡಿರುವ ಸೂಚನೆಗಳನ್ವಯ ಖಾಲಿ ಇರುವ ಬಿ.ಆರ್,ಪಿ. ಸಿ.ಆರ್.ಪಿ.ಹುದ್ದೆಗಳಿಗೆ ಮಾತ್ರ ಸೀಮಿತಗೊಂಡು ಭರ್ತಿ ಮಾಡಲು ಸರ್ಕಾರದ ಆದೇಶದಂತೆ ಸೂಚಿಸಿದೆ. ಅದರಂತೆ ಮುಂದಿನ ಕ್ರಮಕ್ಕೆಗೊಳ್ಳಲು ಆದೇಶಿಸಿದೆ.

1. ಬಿ.ಆರ್.ಪಿ.(ಪ್ರಾಥಮಿಕ) ಬಿ.ಆರ್.ಪಿ.(ಪ್ರೌಢಶಾಲೆ) ಹಾಗೂ ಸಿ.ಆರ್.ಪಿ. ಹುದ್ದೆಗಳಿಗೆ 10 ವರ್ಷದ ಸೇವಾಹಿರಿತನ ಹೊಂದಿದ ಶಿಕ್ಷಕರಿಂದ ಅರ್ಜಿಗಳನ್ನು ಆಹ್ವಾನಿಸಿ, ಜಿಲ್ಲಾ ಸೇವಾ ಹಿರಿತನದ ಪಟ್ಟಿ ಸಿದ್ಧಪಡಿಸಿ ಕೌನ್ಸಿಲಿಂಗ್ ಮೂಲಕ ಜಿಲ್ಲೆಯನ್ನು ಘಟಕವನ್ನಾಗಿಸಿಕೊಂಡು ಭರ್ತಿ ಮಾಡಲು ಸೂಚಿಸಿದೆ.
2. ಈ ರೀತಿ ಭರ್ತಿ ಮಾಡುವ ಸಂದರ್ಭದಲ್ಲಿ "ಎ." "ಬಿ." ಹಾಗೂ "ಸಿ." ವಲಯ ಎಂದು ಪರಿಗಣಿಸದೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವುದು.
3. ಹಾಲಿ ಸೇವೆ ಸಲ್ಲಿಸುತ್ತಿರುವ ಸಿ.ಆರ್.ಪಿ. ಮತ್ತು ಬಿ.ಆರ್.ಪಿ.ಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
4. ಇಬ್ಬರು ಅಭ್ಯರ್ಥಿಗಳು ಸೇವಾ ಹಿರಿತನದಲ್ಲಿ ಎಲ್ಲಾ ಮಾನದಂಡದ ಅನ್ವಯ ಸಮನಾಗಿದ್ದ ಪಕ್ಷದಲ್ಲಿ ಮಹಿಳಾ ಅಭ್ಯರ್ಥಿಗಳಿಗೆ, ಪ.ಜಾತಿ ಹಾಗೂ ಪ.ಪಂಗಡದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲು ಸೂಚಿಸಿದೆ.

5. ಸರ್ವ ಶಿಕ್ಷಣ ಅಭಿಯಾನ ಯೋಜನೆ ಪೂರ್ಣಗೊಂಡ ನಂತರ ಅಥವಾ ಯೋಜನಾ ಕಾರ್ಯದಿಂದ ಬಿಡುಗಡೆಮಾಡಿದ ನಂತರ (ಯಾವುದು ಮೊದಲು ಅಲ್ಲಿಯವರೆಗೆ) ನಿಯೋಜಿತ ಶಿಕ್ಷಕರು ಸಂಬಂಧಿಸಿದ ಜೇಷ್ಠತಾ ಘಟಕದಲ್ಲಿ ಸೇವೆಗೆ ಹಾಜರಾಗಲು ಕ್ರಮ ಕೈಗೊಳ್ಳುವುದು.

(ಎಸ್.ಸೆಲ್ವ ಕುಮಾರ)
ರಾಜ್ಯಯೋಜನಾನಿರ್ದೇಶಕರು
ಸರ್ವಶಿಕ್ಷಣಅಭಿಯಾನಬೆಂಗಳೂರು
ಬೆಂಗಳೂರು–1

(ಜಿ.ಕುಮಾರ ನಾಯಕ)
ಆಯುಕ್ತರು.
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು–1.

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು

2. ಸರ್ಕಾರದ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಿಕ್ಷಣ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು–1 ಇವರ ಮಾಹಿತಿಗಾಗಿ.
3. ಕಚೇರಿ ಪ್ರತಿ.

\\Cpityping\E\EST4\est4(7)1-for merge. doc